ಚಿತ್ರ: ಅಮೀರಖಾನ್ ಡಂಗಿ





# ಮಕ್ಕಳಿಗೆ ಬೇಕು ಹೊರಾಂಗಣ ಆಟ

**ಯಾವುದೇ ಭಯವಿಲ್ಲದೆ ಮೈದಾನಗಳಲ್ಲಿ ಆಟವಾಡುವುದು ವಿಶ್ವಸಂಸ್ಥೆಯೇ ಘೋಷಿಸಿದ ಮಕ್ಕಳ ಹಕ್ಕು. ಈ ಹಕ್ಕನ್ನು ಸಂರಕ್ಷಿಸಲು ನಮಗೇಕೆ ಸಾಧ್ಯವಾಗುತ್ತಿಲ್ಲ?**

■ ಡಾ. ವಿನತೆ ಶರ್ಮ

ಮಕ್ಕಳು ಮುಕ್ತವಾಗಿ ಆಟವಾಡಲು ನಮ್ಮ ಬೀದಿಗಳು ಸೂಕ್ತ ಸ್ಥಳಗಳಲ್ಲ. ವಾಹನಗಳ ಭಯ. ಸಮೀಪವಿರುವ ಪಾರ್ಕ್‌ನಲ್ಲಿ ಆಡಬಹುದು. ಆದರೆ, ಪ್ರತಿ ದಿನವೂ ಇಲ್ಲಿಗೆ ಮಕ್ಕಳನ್ನು ಕರೆದುಕೊಂಡು ಬರಲು ಅಥವಾ ಅಲ್ಲೇ ಎರಡು ಘಂಟೆ ಇರುವುದು ಕುಟುಂಬದವರಿಗೆ ಕಷ್ಟ. ಏಕೆಂದರೆ ಹೆಚ್ಚಿನ ತಂದೆ ತಾಯಿಯರು ಕೆಲಸಕ್ಕೆ ಹೋಗುತ್ತಾರೆ; ಸಂಜೆ ಆರು ಘಂಟೆಯ ನಂತರ ಊಟದ ತಯಾರಿ ಆಗಬೇಕು. ಅಥವಾ ಮಕ್ಕಳಿಗೆ ನಾನಾ ತರಹದ ಹೋಮ್ ವರ್ಕ್ ಇರುತ್ತದೆ. ಹೆಚ್ಚಿನ ಮಕ್ಕಳು ಸಂಜೆ ಟ್ಯೂಷನ್ನಿಗೆ ಹೋಗುತ್ತಾರೆ!

ನಗರಗಳಲ್ಲಿ ಮಕ್ಕಳು ಡೇ ಕೇರ್ ಸೆಂಟರ್‌ಗಳಲ್ಲಿ ಹೆಚ್ಚು ಕಾಲ ಕಳೆಯುತ್ತಾರೆ. ಅದು ಸಾಮಾನ್ಯ ಎಂಬಂಥ ಸ್ಥಿತಿ ಇದೆ. ಇಲ್ಲೆಲ್ಲ ಮಕ್ಕಳಿಗೆ ಒಳಾಂಗಣ ಆಟಗಳನ್ನು ಅನುಮೋದಿಸಲಾಗುತ್ತಿದೆ. 'ನಮ್ಮ ಸೆಂಟರ್‌ಗೆ ಬರುವ ಮಕ್ಕಳನ್ನು ಹೊರಗಡೆ ಆಡಲು ಬಿಟ್ಟಾಗ ಏನಾದರೂ ಆದಲ್ಲಿ ಕೇಂದ್ರವನ್ನು ಮುಚ್ಚಬೇಕಾಗುತ್ತದೆ' ಎನ್ನುವುದು ಕೇರ್ ಸೆಂಟರ್‌ನ ಮಂಜುಳಾ ಅವರ ದುಗುಡ.

ಮಕ್ಕಳನ್ನ ಬೇರೆ ಕುಟುಂಬದ ಇತರರ ಜತೆ ಅಥವಾ ತಂದೆ ತಾಯಿಯರ ಗಮನದಲ್ಲಿ ಬಿಟ್ಟು ಬಿಡಲು ಬಹುತೇಕರಿಗೆ ಒಪ್ಪಿಗೆಯಿಲ್ಲ. ಇದಕ್ಕೆ ಮುಖ್ಯ ಕಾರಣ ಮಕ್ಕಳ ಹಿತರಕ್ಷಣೆ ಮತ್ತು ಅವರ ಕಾಪಾಡುವಿಕೆ ವಿಷಯಗಳಲ್ಲಿ ಇರುವ ಭಿನ್ನಾಭಿಪ್ರಾಯಗಳು.

ಈಗಂತೂ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಕಂಡು ತಮ್ಮ ಒಂದು ಮಗು ಅಥವಾ ಇರುವ ಎರಡು ಮಕ್ಕಳ ಬಗ್ಗೆ ಪೋಷಕರಿಗೆ ಸಹಜವಾದ ಭಯ ಉಂಟಾಗಿದೆ. ಇತರರನ್ನು ಹೇಗೆ ಮತ್ತು ಎಷ್ಟು ಮಟ್ಟಿಗೆ ನಂಬುವುದು? ನಂಬಿದ ವ್ಯಕ್ತಿ ನಮ್ಮ ಮಕ್ಕಳಸ್ನೇಹಿ ಎಂದು ಹೇಗೆ ಹೇಳುವುದು? ಏನಾದರೂ ಹೆಚ್ಚು ಕಡಿಮೆಯಾದಾಗ ಮಕ್ಕಳಿಗೆ ಘಾಸಿ ಮಾಡಿದ ವ್ಯಕ್ತಿ ಮಕ್ಕಳಕಂಟಕ ಎಂದು ಹೇಗೆ ರುಜು ಮಾಡುವುದು? ನಮ್ಮ ಮಕ್ಕಳನ್ನು ಇತರರ ಮಕ್ಕಳಿಗೆ ಬೇರೆಯಾಗಿ ನೋಡುವುದು, ಗದರುವುದು, ಅವರಿಗೆ ಇವರಿಗೆ ಬೇರೆ ಬೇರೆ ರೂಲ್ಸ್, ಅವರ ಮಕ್ಕಳು ನಮ್ಮ ಮಕ್ಕಳ ಮೇಲೆ ಜೋರು ಮಾಡಿ, ಕಾಟ ಕೊಡುವುದಿಲ್ಲ ಎಂದು ಏನು ಗ್ಯಾರಂಟಿ? ಹೀಗೆ ಅನೇಕ ತಲೆನೋವಿನ ಪ್ರಶ್ನೆಗಳಿರುವುದರಿಂದ ತಮ್ಮ ಮಕ್ಕಳು 'ಡೇ ಕೇರ್ ಸೆಂಟರ್ ಗೆ ಹೋಗಲಿ' ಎನ್ನುವ ನಿಲುವು ಹೊಸ ಜಾಯಮಾನದ ಕಿರಿ ವಯಸ್ಸಿನ ಪಾಲಕರದ್ದು.

ಹಿಂದೆ ಬಹುತೇಕ ಎಲ್ಲರ ಬಾಲ್ಯ ಸಹಜತೆಯಿಂದ ಕೂಡಿರುತ್ತಿತ್ತು. ಹತ್ತಾರು ಜನ ಮಕ್ಕಳು ಸೇರಿ ಇಡೀ ಬೀದಿ ಆಕ್ರಮಿಸಿಕೊಂಡು ಒಟ್ಟಿಗೆ ಆಟವಾಡುತ್ತಿದ್ದರು. ಹೊರಾಂಗಣ ಆಟಗಳ ಅವಕಾಶ ಯಥೇಚ್ಚವಾಗಿತ್ತು. ಜೂಟಾಟ, ಕಬ್ಬಡಿ, ಕೊಕೊ, ಮರಕೋತಿಯಾಟ, ಲಗೋರಿ, ಗಿಲ್ಲಿದಾಂಡು, ಬಚ್ಚಿಟ್ಟುಕೊಳ್ಳುವ ಆಟ, ಗೋಲಿ, ನಾಲ್ಕು ಮನೆ ಕಲ್ಲಾಟ, ಕುಂಟೆಬಿಲ್ಲೆ, ಕುಂಟಾಟ, ಏರೋಪ್ಲೇನ್ ಆಟ, ಕ್ರಿಕೆಟ್ ಆಟಗಳ ಜೊತೆ ಮರ ಹತ್ತಿ ಹಣ್ಣುಗಳನ್ನು ತಿಂದು ಖುಷಿ ಪಡುತ್ತಿದ್ದರು. ಅಂಥ ಆ ದಿನಗಳ ನೆನಪು ನಮ್ಮಂಥವರಲ್ಲಿ ಸದಾ ಹಸಿರು.

## ಎಲ್ಲರಿಗೂ ಭಯ, ಭಯ!

'ಬೆಂಗಳೂರಿನಲ್ಲಿ ನನ್ನ ಮಕ್ಕಳು ಹೊರಾಂಗಣ ಆಟವಾಡಲು ಹೊರಟಾಗ ನಮಗೆ ಉಂಟಾಗುವ ಮೊದಲ ಸಮಸ್ಯೆ, ಆಟದ ಮೈದಾನ ಎಲ್ಲಿ, ಹೇಗಿದೆ ಎನ್ನುವುದು' ಇದು ಗೃಹಿಣಿ ಸುಮಾಳ ಮಾತು.

ಪಶ್ಚಿಮದ ಕೆಲವು ದೇಶಗಳಲ್ಲಿ ಪ್ರತಿಯೊಂದು ನಿಶ್ಚಿತ ನಗರಪ್ರದೇಶಕ್ಕೂ ಒಂದು ಪಾರ್ಕ್ ಇರುತ್ತದೆ. ಅಲ್ಲಿ ಮಕ್ಕಳು ಆಟವಾಡುವುದು, ದೊಡ್ಡವರು ತಮ್ಮ ವಾಕ್ ಹೋಗುವುದು ಸಾಮಾನ್ಯ ದೃಶ್ಯ ಎಂದು ಸಾಫ್ಟ್‌ವೇರ್ ಉದ್ಯೋಗಿ ಅನಂತ್ ಗೊಣಗುವುದರಲ್ಲಿ ಅರ್ಥವಿದೆ. ಇನ್ನು ಕ್ರಿಕೆಟ್ ಪ್ರೇಮಿ ಹಾಗೂ ಇಬ್ಬರು ಗಂಡು ಮಕ್ಕಳಿರುವ ವಿವೇಕ್ ಹೇಳುವಂತೆ– 'ಕ್ರಿಕೆಟ್ ಬಾಲ್ ಚಿಮ್ಮಿಕೊಂಡು ಎಲ್ಲೆಲ್ಲೋ ಹೋಯಿತು, ಅದನ್ನು ತರಲು ನಮ್ಮ ಹುಡುಗ